**ನಾಗರಿಕ ಸೌಲಭ್ಯ ನಿವೇಶನಗಳ ಗುತ್ತಿಗೆ ಆಧಾರದ ಮೇಲೆ ಅರ್ಜಿ ಸಲ್ಲಿಸಲು ಗಮನವಹಿಸಬೇಕಾದ ಪ್ರಮುಖ ಅಂಶಗಳು.**

1. **ಹಂಚಿಕೆಯ ಪ್ರಕ್ರಿಯೆ:–** ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆಯನ್ನು 1989 ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಾಗರಿಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಗಳ ಅನುಸಾರ ಮಾಡಲಾಗುವುದು.

2. **ಅರ್ಜಿ ಸಲ್ಲಿಸುವ ಬಗ್ಗೆ:–**

ಅ) ಅರ್ಜಿ ನಮೂನೆಯ ಬೆಲೆ ರೂ.1000/– ಪಾವತಿ ಮಾಡಿ ನಿಗದಿತ ಅರ್ಜಿಯನ್ನು ಕೆನರಾ ಬ್ಯಾಂಕ್, ಬಿ.ಡಿ.ಎ ಎಕ್ಸ್‌ಟೆನ್ಷನ್ ಕೌಂಟರ್‌ನಲ್ಲಿ ಪಡೆದುಕೊಳ್ಳಬಹುದು.

ಆ) ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆ ಪಡೆಯಲು ಬೆಂ.ಅ.ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸಿರುವ ಸಂಸ್ಥೆಗಳು ಕಾಲಂ 8 ರಲ್ಲಿ ತಿಳಿಸಿರುವಂತೆ, ನಿಗದಿತ ಅರ್ಜಿ ನಮೂನೆ–II ರ ಜೊತೆಗೆ ನಿವೇಶನಕ್ಕೆ ಪ್ರಕಟಿಸಿರುವ ಗುತ್ತಿಗೆ ಮೊಬಲಗಿನ ಶೇಕಡ 10 ರಷ್ಟು ಪ್ರಾರಂಭಿಕ ಠೇವಣಿಯನ್ನು ಸಲ್ಲಿಸಬೇಕು.

ಇ) ಅರ್ಜಿಯನ್ನು ದಿನಾಂಕ: 09.05.2025 ಮಧ್ಯಾಹ್ನ 4.00 ಗಂಟೆ ಅಥವಾ ಅದಕ್ಕಿಂತ ಮುಂಚಿತವಾಗಿ ವೈಯಕ್ತಿಕವಾಗಿ ಬೆಂ.ಅ.ಪ್ರಾಧಿಕಾರದಲ್ಲಿ ಇರುವ ಕೆನರಾ ಬ್ಯಾಂಕ್ ನಗದು ಕೌಂಟರಿನ ಮೂಲಕ ಬೆಂ.ಅ.ಪ್ರಾ ಆಯುಕ್ತರ ಕಛೇರಿಗೆ ತಲುಪುವಂತೆ ಖುದ್ದಾಗಿ ಸಲ್ಲಿಸಬಹುದು ಅಥವಾ ನೋಂದಣಿ ಅಂಚೆ ಮೂಲಕ ಕಳುಹಿಸಬಹುದು. ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ನಂತರ ಬರುವ ಮತ್ತು ದೋಷಯುಕ್ತವಾದ ಮತ್ತು ಸರಿಯಾಗಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಈ) ಅರ್ಜಿದಾರರು ಅರ್ಜಿಯ ಜೊತೆಗೆ ತಮ್ಮ ಸಂಸ್ಥೆ/ಸೊಸೈಟಿ/ಸಂಘದ ಕಳೆದ ಐದು ವರ್ಷಗಳ ಆರ್ಥಿಕ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧಕರ ವರದಿ ಹಾಗೂ ಹಂಚಿಕೆ ಇತ್ಯಾದಿ ಪಡೆಯಲು ಸಂಸ್ಥೆ / ಟ್ರಸ್ಟ್ ಹೊರಡಿಸಿರುವ ನಿರ್ಣಯವನ್ನು ಲಗತ್ತಿಸಿ ಸಲ್ಲಿಸಬೇಕು.

ಉ) ನೋಂದಣಿ ಶುಲ್ಕವನ್ನು ನಗದಾಗಿ/ಡಿಡಿ/ಆರ್.ಟಿ.ಜಿ.ಎಸ್ ರೂಪದಲ್ಲಿ ಮಾತ್ರ ಸಂದಾಯ ಮಾಡಬೇಕು.

3. **ನೋಂದಣಿ:–**

ಅ) ನಾಗರಿಕ ಸೌಲಭ್ಯದ ನಿವೇಶನಕ್ಕೆ ಅರ್ಜಿ ಸಲ್ಲಿಸಲು ಅಪೇಕ್ಷೆ ಹೊಂದಿರುವ ಸಂಸ್ಥೆಗಳು ಕೆನರಾ ಬ್ಯಾಂಕ್, ಬಿ.ಡಿ.ಎ ಎಕ್ಸ್‌ಟೆನ್ಷನ್ ಕೌಂಟರ್ ಬೆಂಗಳೂರು ರಲ್ಲಿ ನಿಗಧಿತ ನೊಂದಣಿ ಶುಲ್ಕ ಪಾವತಿ ಮಾಡಿ ನೋಂದಣಿ ಮಾಡಿಸಬೇಕು. ದಿನಾಂಕ: 09.04.2025 ರಿಂದ ಕೆನರಾ ಬ್ಯಾಂಕ್, ಬಿ.ಡಿ.ಎ ಎಕ್ಸ್‌ಟೆನ್ಷನ್ ಕೌಂಟರ್‌ನಲ್ಲಿ ಸಿ.ಎ ನಿವೇಶನ ಹಂಚಿಕೆಗೆ ಅರ್ಜಿ ಪಡೆಯಬಹುದಾಗಿದೆ. ಸಂಬಂಧಪಟ್ಟ ಸಿ.ಎ ನಿವೇಶನಗಳ ಬಗ್ಗೆ ನೊಂದಣಿ ಶುಲ್ಕವನ್ನು ಪ್ರಕಟಣೆಯ ಕಾಲಂ 8 ರಲ್ಲಿ ತಿಳಿಸಲಾಗಿದೆ.

ಆ) ಒಂದಕ್ಕಿಂತ ಹೆಚ್ಚು ನಿವೇಶನಗಳಿಗೆ ಅರ್ಜಿ ಸಲ್ಲಿಸಲು ಯಾವುದೇ ಸಂಸ್ಥೆಯು ಬಯಸಿದ್ದಲ್ಲಿ ಪ್ರತಿ ನಿವೇಶನಕ್ಕೆ ಪ್ರತ್ಯೇಕವಾಗಿ ನೋಂದಣಿ ಮಾಡಬೇಕು.

ಇ) ಯಾವುದೇ ಸಂಸ್ಥೆಯು ನೋಂದಣಿ ಶುಲ್ಕವನ್ನು ಹಿಂತೆಗೆದುಕೊಳ್ಳಲು ಬಯಸಿದರೆ, ಸೇವಾ ವೆಚ್ಚಗಳ ಬಗೆಗೆ ನೋಂದಣಿ ಶುಲ್ಕದ 10% ಹಣವನ್ನು ಕಡಿತಗೊಳಿಸಿ ಸಂಬಂಧಪಟ್ಟ ಸಂಸ್ಥೆಗೆ ನೋಂದಣಿ ಶುಲ್ಕವನ್ನು ಹಿಂದಿರುಗಿಸಲಾಗುವುದು.

ಈ) ಸಂಸ್ಥೆಯು ಒಮ್ಮೆ ನೋಂದಣಿ ಮಾಡಿ ಅದನ್ನು ಹಿಂತೆಗೆದುಕೊಳ್ಳದಿದ್ದರೆ ಸದರಿ ನೋಂದಣಿಯು ಮುಂದಿನ ಹಂಚಿಕೆಗೂ ಸಿಂಧುವಾಗಿರುತ್ತದೆ.

ಉ) ಸಂಸ್ಥೆಗೆ ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆ ಆದ ಪಕ್ಷದಲ್ಲಿ ಅವರು ಪಾವತಿ ಮಾಡಿದ್ದ ನೋಂದಣಿ ಶುಲ್ಕವನ್ನು ಮರುಪಾವತಿ ಮಾಡುವುದಿಲ್ಲ ಅಥವಾ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.

**4. ಸಂಘ–ಸಂಸ್ಥೆಗಳ ಅರ್ಹತೆ ಬಗ್ಗೆ:–**

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿಯಮಗಳ ನಿಯಮ–5ರ ಅನ್ವಯ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸಿರುವ ಸಂಸ್ಥೆಗಳಿಗೆ ಮಾತ್ರ ಪ್ರಾಧಿಕಾರವು ನಾಗರಿಕ ಸೌಲಭ್ಯದ ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.

ಆ) ಸಂಸ್ಥೆ ಅಂದರೆ, 1960 ರ ಕರ್ನಾಟಕ ಸಂಸ್ಥೆಗಳ ನೋಂದಣಿ ಅಧಿನಿಯಮದ ಅನ್ವಯ ನೋಂದಣಿಯಾಗಿರುವ ಒಂದು ಸಂಸ್ಥೆ ಸೊಸೈಟಿ ಅಥವಾ ಸಂಘ ಅಥವಾ 1960ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದ ಅನ್ವಯ ನೋಂದಣಿಯಾಗಿರುವ ಸಹಕಾರಿ ಸಂಘ ಅಥವಾ ಧರ್ಮಾರ್ಥ ಶೈಕ್ಷಣಿಕ ಅಥವಾ ಧಾರ್ಮಿಕ ಉದ್ದೇಶಕ್ಕಾಗಿ ಸಂಪೂರ್ಣವಾಗಿ ರಚನೆಯಾಗಿರುವ ಒಂದು ಟ್ರಸ್ಟ್ ಎಂದು ಅರ್ಥ.

**5. ಗುತ್ತಿಗೆ ಮೊತ್ತ ಪಾವತಿ ಹಾಗೂ ಸಂಸ್ಥೆಗೆ ನಿವೇಶನದ ಹಂಚಿಕೆ ಮಾಡುವ ಬಗ್ಗೆ:–**

ಅ) ನಾಗರಿಕ ಸೌಲಭ್ಯದ ನಿವೇಶನವನ್ನು 30 ವರ್ಷಗಳಿಗೆ ಮೀರದಂತೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.

ಆ) ಯಾವುದೇ ಪ್ರದೇಶದಲ್ಲಿ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗುವ ನಿವೇಶನದ ಗುತ್ತಿಗೆ ಮೊಬಲಗನ್ನು ನಿವೇಶನದ ಸರಿಯಾದ ಅಳತೆಯ ಹಾಗೂ ಸ್ಥಳೀಯ ಮಾರ್ಗಸೂಚಿ ದರಗಳ ಆಧಾರದ ಮೇಲೆ ಪ್ರಾಧಿಕಾರವು ಗುತ್ತಿಗೆ ಮೊತ್ತವನ್ನು ನಿಗದಿಗೊಳಿಸಲಾಗುತ್ತದೆ.

ಇ) ಗುತ್ತಿಗೆ ಮೊಬಲಗನ್ನು ಒಟ್ಟಿಗೆ ಪಾವತಿ ಮಾಡಬಹುದು ಅಥವಾ ಗುತ್ತಿಗೆಯ ಅವಧಿಯಲ್ಲಿ ವಾರ್ಷಿಕ ಕಂತುಗಳಲ್ಲಿ (Annuity) ಪಾವತಿ ಮಾಡಬಹುದು. ಗುತ್ತಿಗೆ ಮೊಬಲಗನ್ನು (Lumpsum) ಒಟ್ಟಿಗೆ ಪಾವತಿ ಮಾಡುವುದಾದರೆ ಗುತ್ತಿಗೆದಾರನು ಪ್ರತಿ ವರ್ಷಕ್ಕೆ 10 ಚದರ ಮೀಟರ್ ಒಂದಕ್ಕೆ ರೂ.1/– ರಂತೆ ಹೆಚ್ಚುವರಿ ಗುತ್ತಿಗೆ ಮೊಬಲಗನ್ನು ಸಹ ಪಾವತಿ ಮಾಡಬೇಕಾಗುವುದು.

ಈ) ಅರ್ಜಿ ಆಹ್ವಾನಿಸುವಾಗ ಪ್ರಕಟಿಸಿರುವ ನಿವೇಶನದ ಗುತ್ತಿಗೆ ಮೊಬಲಗನ್ನು ಪ್ರಾಧಿಕಾರ ಬದಲಾವಣೆ ಮಾಡಬಹುದಾಗಿರುತ್ತದೆ. ಸಂಸ್ಥೆಯು, ಬದಲಾವಣೆ ಮಾಡಿದ ದರಗಳಲ್ಲಿ ನಿವೇಶನ ಪಡೆಯಲು ಒಪ್ಪಬಹುದು ಅಥವಾ ಹಂಚಿಕೆಯನ್ನು ನಿರಾಕರಿಸಬಹುದಾಗಿರುತ್ತದೆ.

**6. ಹಂಚಿಕೆ ಬಗ್ಗೆ ಷರತ್ತುಗಳು:–**

ಅ) ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆಯ ಬಗೆಗಿನ ಷರತ್ತುಗಳನ್ನು ಅರ್ಜಿ ನಮೂನೆಯಲ್ಲಿ ನಮೂದಿಸಲಾಗಿರುತ್ತದೆ.

ಆ) ಯಾವುದೇ ನಿರ್ದಿಷ್ಟವಾದ ಸಿ.ಎ. ನಿವೇಶನದ ಹಂಚಿಕೆ ಪಡೆಯಲು ಸಾರ್ವಜನಿಕರಿಂದ ಸಾಕಷ್ಟು ಕೋರಿಕೆ ಬರದಿದ್ದ ಪಕ್ಷದಲ್ಲಿ ಪ್ರಾಧಿಕಾರವು ಸಮಗ್ರ ಅಭಿವೃದ್ಧಿ ಯೋಜನೆಯ ಅನುಸಾರವಾಗಿ ಅಂತಹ ಸಿ.ಎ. ನಿವೇಶನಗಳ ಉದ್ದೇಶವನ್ನು ಬದಲಾವಣೆ ಮಾಡಿ ಅವುಗಳ ಹಂಚಿಕೆಗಾಗಿ ಮರು ಪ್ರಕಟಣೆ ಮಾಡಬಹುದಾಗಿರುತ್ತದೆ.

ಇ) **ಹಂಚಿಕೆಯ ಸಂಬಂಧ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.** ಯಾವುದೇ ನಿವೇಶನಕ್ಕಾಗಿ ಸಲ್ಲಿಸಲಾಗಿರುವ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

ಈ) ಅರ್ಜಿದಾರ ಸಂಸ್ಥೆಯು ತಾವು ಸಲ್ಲಿಸುವ ಅರ್ಜಿಯ ಜೊತೆಗೆ ಸಿ.ಐ.ಟಿ.ಬಿ./ಬಿ.ಡಿ.ಎ. ಯಿಂದ ಅವರಿಗೆ ಈ ಹಿಂದೆ ಹಂಚಿಕೆ ಮಾಡಲಾಗಿದ್ದ ಸಿ.ಎ. ನಿವೇಶನದ ವಿವರಗಳನ್ನು ಸಲ್ಲಿಸಬೇಕು.

ಉ) ಹಂಚಿಕೆಗಾಗಿ ಪ್ರಸ್ತಾಪಿಸಿರುವ ಸಿ.ಎ. ನಿವೇಶನಗಳ ಸಂಬಂಧ ಅರ್ಜಿಯನ್ನು ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಾರ್ವಜನಿಕರು/ಹಿತಾಸಕ್ತಿದಾರರು ತಮ್ಮ ಆಕ್ಷೇಪಣೆಯನ್ನು ಪೂರಕ ದಾಖಲೆಗಳೊಂದಿಗೆ ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಸಲ್ಲಿಸಬಹುದಾಗಿದೆ. ಅಂತಹ ಆಕ್ಷೇಪಣೆಗಳ ಸಂಬಂಧ ಪ್ರಾಧಿಕಾರದ ನಿರ್ಣಯವು ಅಂತಿಮವಾಗಿರುತ್ತದೆ.

**ಊ) ಯಾವುದೇ ಸಿ.ಎ ನಿವೇಶನದ ಸಂಬಂಧ ಯಾವುದೇ ರೀತಿಯ ತಾಂತ್ರಿಕ/ಆಡಳಿತಾತ್ಮಕ/ಕಾನೂನಾತ್ಮಕ ನಿರ್ಬಂಧಗಳು ಕಂಡುಬಂದಲ್ಲಿ ಅಂತಹ ಸಿ.ಎ ನಿವೇಶನವನ್ನು ಯಾವುದೇ ಮುನ್ಸೂಚನೆಯನ್ನು ನೀಡದೆ ಹಂಚಿಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.**

ಋ) ಹಂಚಿಕೆಯಿಂದ ಹಿಂಪಡೆಯಲಾದ ಸಿ.ಎ ನಿವೇಶನ ಅಥವ ಸಂಸ್ಥೆಗಳಿಗೆ ಸಿ.ಎ ನಿವೇಶನ ಹಂಚಿಕೆಯಾಗದ ಪ್ರಕರಣಗಳಲ್ಲಿ ಸಂಸ್ಥೆಗಳು ಪಾವತಿಸಿದ ಆರಂಭಿಕ ಠೇವಣಿಯನ್ನು ಬಡ್ಡಿ ರಹಿತವಾಗಿ ಹಿಂದಿರುಗಿಸಲಾಗುವುದು.

***